ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 1-8
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹಳಗನ್ನಡ – ಅಡ್ಡಹೆಸರು

**ಡಾ. ಪುಷ್ಪಾ ಬಸನಗೌಡರ**
ಸಹ ಪ್ರಾಧ್ಯಾಪಕರು, ಮಹಾಂತ ಪ್ರಥಮ ದರ್ಜೆ ಮಹಾವಿದ್ಯಾಲಯ, ರಾಯಾಪೂರ, ಧಾರವಾಡ

***Abstract:***
*ವ್ಯಕ್ತಿಯ ಹೆಸರಿನ ಜೊತೆಗೆ ಬಳಸುವ ಕುಟುಂಬ ನಾಮವೇ ಅಡ್ಡಹೆಸರು. ಒಬ್ಬ ವ್ಯಕ್ತಿಯನ್ನು ಅತ್ಯಂತ ಸಮೀಪದಿಂದ ಗುರ್ತಿಸುವುದಕ್ಕೆ ಹೆಸರಿನ ಜೊತೆಗೆ ಬಳಸುವ ಇನ್ನೊಂದು ಹೆಸರೇ ಅಡ್ಡಹೆಸರು. ಹೀಗಾಗಿ ಈ ಅಡ್ಡಹೆಸರುಗಳು ಒಬ್ಬ ವ್ಯಕ್ತಿಯ ಗ್ರಾಮ, ಕುಟುಂಬ, ವಂಶ, ವ್ಯಕ್ತಿ, ಜಾತಿಗಳಲ್ಲಿ ಯಾವುದಾದರೊಂದರ ಪ್ರತೀಕವಾಗಿರುತ್ತವೆ. ಅಂದರೆ ವ್ಯಕ್ತಿಯ ಅಡ್ಡಹೆಸರಿನ ಮೂಲಕ ಒಬ್ಬ ವ್ಯಕ್ತಿಯ ಕುರಿತಾದ ವೈಯಕ್ತಿಕ ಪರಿಚಯದ ಜೊತೆಗೆ ಆತನ ಪೂರ್ವಜರ ನೆಲೆ, ಕುಟುಂಬದ ನೆಲೆ, ಜೀವನ ವಿಧಾನ, ಮನೋಧರ್ಮ, ಅವರ ಮನೆತನದ ಸಂಸ್ಕೃತಿ ಹಾಗೂ ಪರಂಪರೆಗಳನ್ನು ಗುರುತಿಸಬಹುದು. ಈ ಮೂಲಕ ಒಬ್ಬ ವ್ಯಕ್ತಿಯ ಅಡ್ಡಹೆಸರಿನ ಜೊತೆಗೆ ಆ ಗ್ರಾಮದ, ವಂಶದ, ಭಾಷೆಯ, ಜಾತಿಯ, ಜನಾಂಗದ ಇತಿಹಾಸವನ್ನು ಅರಿತುಕೊಳ್ಳಬಹುದು. ಜೊತೆಗೆ ಅಡ್ಡಹೆಸರಿನ ಅಧ್ಯಯನದಿಂದ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳಬಹುದು.*

***Keywords:*** *ಕನ್ನಡ ಸಾಹಿತ್ಯ, ಹಳಗನ್ನಡ, ಅಡ್ಡ ಹೆಸರು, ಕುಟುಂಬ ನಾಮ.*

**ಪೀಠಿಕೆ**

ಅಡ್ಡಹೆಸರುಗಳು ಪೀಳಿಗೆಯಿಂದ ಪೀಳಿಗೆಗೆ ಮುಂದುವರೆಯಲೂಬಹುದು. ಕೆಲವು ವಿಶಿಷ್ಟ ಸಂದರ್ಭದಲ್ಲಿ ಬದಲಾಗಲೂಬಹುದು. ಅಡ್ಡಹೆಸರುಗಳು ವ್ಯಕ್ತಿಯ ಹೆಸರಿನ ಮೊದಲೂ ಬರಬಹುದು, ವ್ಯಕ್ತಿಯ ಹೆಸರಿನ ನಂತರವೂ ಬರಬಹುದು. ಅಡ್ಡಹೆಸರುಗಳನ್ನು ಬಳಸುವ ವಿಧಾನ, ಸ್ವರೂಪ ಇತರ ಸಂಗತಿಗಳ ಆಧಾರದಿಂದ ಅಧ್ಯಯನದ ಅನುಕೂಲಕ್ಕಾಗಿ ಹಲವು ಪ್ರಕಾರಗಳಲ್ಲಿ ವರ್ಗೀಕರಿಸಬಹುದು.

1. ಗ್ರಾಮನಾಮವಾಚಿ ಅಡ್ಡಹೆಸರುಗಳು
2. ವೃತ್ತಿನಾಮವಾಚಿ ಅಡ್ಡಹೆಸರುಗಳು
3. ವಸ್ತುನಾಮವಾಚಿ ಅಡ್ಡಹೆಸರುಗಳು
4. ವ್ಯಕ್ತಿನಾಮವಾಚಿ ಅಡ್ಡಹೆಸರುಗಳು
5. ಅಣಕನಾಮವಾಚಿ ಅಡ್ಡಹೆಸರುಗಳು
6. ಮತ, ಧರ್ಮ, ಜಾತಿ ಜನಾಂಗವಾಚಿ ಅಡ್ಡಹೆಸರುಗಳು

ಎಂದು ಇನ್ನೂ ಅನೇಕ ರೀತಿಯಲ್ಲಿ ವಿಂಗಡಿಸಬಹುದು. ಇವುಗಳನ್ನು ವರ್ಗೀಕರಿಸಲು ನಮಗೆ ಸಹಾಯಕವಾಗುವ ಪ್ರಮುಖ ಆಕರ ಸಾಮಗ್ರಿಯೆಂದರೆ ಪ್ರಾಚೀನ ಕಾವ್ಯಗಳು, ವೀರಶೈವ ಪುರಾಣ ಚರಿತ್ರೆಗಳು, ಸಾಹಿತ್ಯ ಚರಿತ್ರೆಗಳು, ಶಾಲಾ ದಾಖಲಾತಿ, ಮತದಾರರ ಪಟ್ಟಿ, ದೂರವಾಣಿ ಕೈಪಿಡಿಗಳು, ಪತ್ರಿಕೆಗಳು, ಇತಿಹಾಸ ಗ್ರಂಥಗಳು ಪ್ರಮುಖ ಪಾತ್ರ ವಹಿಸುತ್ತದೆ. ಲಿಖಿತ ದಾಖಲೆಗಳಿಲ್ಲದ, ಅನಧಿಕೃತ ಅಡ್ಡಹೆಸರುಗಳಿದ್ದಾಗ

***Please cite this article as:*** *ಪುಷ್ಪಾ ಬಸನಗೌಡರ.* (2025). *ಹಳಗನ್ನಡ – ಅಡ್ಡಹೆಸರು. ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(4), 1–8

ಕ್ಷೇತ್ರಕಾರ್ಯದ ಮೂಲಕ ಅಡ್ಡಹೆಸರುಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಬಹುದು. ನನ್ನ ಪ್ರಬಂಧದ ವಿಷಯ ಹಳಗನ್ನಡ ಸಾಹಿತ್ಯಕ್ಕೆ ಸೀಮಿತವಾಗಿರುವುದರಿಂದ 10ನೆಯ ಶತಮಾನದಿಂದ 19ನೆಯ ಶತಮಾನದ ಕಾಲಘಟ್ಟದವರೆಗೆ ವ್ಯಾಪಿಸಿದೆ. ಅಲ್ಲಿ ಬರುವ ಚಂಪೂ ಸಾಹಿತ್ಯದಿಂದ ಪ್ರಾರಂಭಿಸಿ ವಚನ, ರಗಳೆ, ಷಟ್ಪದಿ, ಕೀರ್ತನೆ, ಸಾಂಗತ್ಯ, ತ್ರಿಪದಿ ಹಾಗೂ ಗದ್ಯ ಸಾಹಿತ್ಯವನ್ನು ಅನುಲಕ್ಷಿಸಿ ಇಲ್ಲಿ ಬರುವ ಅಡ್ಡಹೆಸರುಗಳನ್ನು ಹೀಗೆ ಸಂಗ್ರಹಿಸಬಹುದು.

**ಗ್ರಾಮನಾಮವಾಚಿ ಅಡ್ಡಹೆಸರುಗಳು**

ಮಂಡಿಗೆಯ ಮಾದಿರಾಜ, ಹಾವಿನಾಳ ಕಲ್ಲಯ್ಯ, ಮೊರಡಿಯ ಮುದ್ದುಗೌಡ, ಕರೂರ ನಿರಹಂಕಾರ, ಕೆಂಬಾವಿಯ ಭೋಗಣ್ಣ, ಹೇಮಗಲ್ಲ ಹಂಪ, ಉಡುತಡಿಯ ಅಕ್ಕಮಹಾದೇವಿ, ಪುಲಿಗೆರೆಯ ಸೋಮನಾಥ, ಇಳೆಯಾಂಡ ಗುಡಿಮಾರ, ಶಿಶುನಾಳ ಶರೀಫ, ಹಲಗೆಯ ದೇವ, ಗುಮ್ಮಳಾಪುರದ ಸಿದ್ಧಲಿಂಗಯತಿ, ಗೂಳೂರು, ಸಿದ್ಧವೀರಣ್ಣ, ಸೊನ್ನಲಿಗೆ ಸಿದ್ಧರಾಮ, ಮಗ್ಗೆಯ ಮಾಯಿದೇವ, ಹೆಳವನಕಟ್ಟೆ ಗಿರಿಯಮ್ಮ, ನಂದಳಿಕೆಯ ಲಕ್ಷ್ಮೀನಾರಾಯಣಪ್ಪ, ಹಂಪೆಯ ಹರಿಹರ, ಕೊಂಡಗುಳಿ ಕೇಶಿರಾಜ, ಗುಬ್ಬಿಯ ಮಲ್ಲಣಾರ್ಯ, ಅಮರಗುಂಡದ ಮಲ್ಲಿಕಾರ್ಜುನ, ಗರಗದ ಮಡಿವಾಳೇಶ್ವರರು, ಕಡಕೋಳ ಮಡಿವಾಳೇಶ್ವರರು, ಗುಡ್ಡಾಪುರ ದಾನಮ್ಮ, ನೀರಲಕೇರಿ ಬಸವಲಿಂಗರು, ಕೂಡಲೂರು ಬಸವಲಿಂಗರು, ಮೈಲಾರ ಬಸವಲಿಂಗರು, ಮೇಡ್ಲೇರಿ ಶಿವಲಿಂಗ, ಹಾಗಲವಾಡಿ ಮುದ್ವೀರಸ್ವಾಮಿಗಳು ಇತ್ಯಾದಿ.

ಹೀಗೆ ಗ್ರಾಮನಾಮಗಳನ್ನು ಅಡ್ಡಹೆಸರಾಗಿ ಬಳಸಿಕೊಂಡ ಉದಾಹರಣೆಗಳು ಅವರವರ ಕುಟುಂಬದ ನೆಲೆಯನ್ನು ತಿಳಿಸಿಕೊಡುತ್ತವೆ. ಈ ಮೂಲಕ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಪೂರಕ ಸಾಮಗ್ರಿಗಳಾಗಿ ನಿಲ್ಲುತ್ತವೆ.

ಗ್ರಾಮನಾಮದಿಂದ ಕೂಡಿದ ಅಡ್ಡಹೆಸರುಗಳು ಪೂರ್ವಿಕರು ವಾಸವಾಗಿದ್ದ ನೆಲೆಯನ್ನು ತಿಳಿಸುವುದರ ಜೊತೆಗೆ ಆ ಗ್ರಾಮದ ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ ಪ್ರಭಾವಗಳು ಆ ಕುಟುಂಬಗಳ ಮೇಲೆ ಪ್ರಭಾವ ಬೀರಿದ ಸಾಧ್ಯತೆಗಳನ್ನು ತಿಳಿಸುತ್ತವೆ. ಒಂದೇ ಹೆಸರಿನ ವ್ಯಕ್ತಿಗಳು ಅನೇಕರಿದ್ದಾಗ ಅವರನ್ನು ಪ್ರತ್ಯೇಕವಾಗಿ ಗುರುತಿಸಲು ಅವರವರ ಊರುಗಳನ್ನು ಬಳಸಿಕೊಂಡಿರುವುದು ತಿಳಿದುಬರುತ್ತದೆ. ಇಲ್ಲವೇ ಶರಣರ ಐಕ್ಯಸ್ಥಳ, ಶರಣರ ಕರ್ಮಕ್ಷೇತ್ರಗಳಿಂದಲೂ ಅವರನ್ನು ಗುರುತಿಸಿಕೊಂಡಿರುವ ಅಂಶ ಕಂಡುಬರುತ್ತದೆ. ಉದಾ: ನೀರಲಕೇರಿ ಬಸವಲಿಂಗರು, ಕೂಡಲೂರು ಬಸವಲಿಂಗರು, ಐನೂಲಿ ಬಸವಲಿಂಗರು, ಕಡಕೋಳ ಮಡಿವಾಳೇಶ್ವರರು, ಗರಗದ ಮಡಿವಾಳೇಶ್ವರರು.

ಗ್ರಾಮನಾಮದಿಂದ ಕೂಡಿದ ಅಡ್ಡಹೆಸರುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಕೆಲವು ಕುಟುಂಬಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗಿ ಅಲ್ಲಿಯ ಗ್ರಾಮನಾಮವನ್ನು ತಮ್ಮ ಗುರುತಿಗಾಗಿ ಇಟ್ಟುಕೊಂಡಿದ್ದಾರೆ. ಹಾಗಾದರೆ, ಅವರು ವಲಸೆ ಹೋಗಲು ಕಾರಣವೇನು? ಆಡಳಿತ ಸಂಬಂಧಿಯಾಗಿ, ವ್ಯಾಪಾರ ಸಂಬಂಧಿಯಾಗಿ, ಉದ್ಯೋಗ ಸಂಬಂಧಿಯಾಗಿ ಇತರೇ ಕಾರಣಗಳಿಂದಲೂ ಇವರು ಗ್ರಾಮನಾಮಗಳನ್ನು ಅಡ್ಡಹೆಸರಾಗಿ ಬಳಸಿಕೊಂಡಿರಬಹುದು. ಉದಾ: ಹಾಗಲವಾಡಿ ಮುದ್ವೀರಸ್ವಾಮಿ, ಗುಡ್ಡಾಪುರ ದಾನಮ್ಮ, ನೀರಲಕೇರಿ ಬಸವಲಿಂಗರು, ಕೂಡಲೂರು ಬಸವಲಿಂಗರು, ಮೈಲಾರ ಬಸವಲಿಂಗರು, ಸೋದೆಯ ಬಸವಲಿಂಗರು, ಐನೂಲಿ ಬಸವಲಿಂಗರು, ಗರಗದ ಮಡಿವಾಳೇಶ್ವರರು ಹಾಗೂ ಕಡಕೋಳ ಮಡಿವಾಳೇಶ್ವರರು. ಉದಾ: ಹಾಗಲವಾಡಿ ಮುದ್ವೀರಸ್ವಾಮಿ ಹಾಗೂ ಗುಡ್ಡಾಪುರ ದಾನಮ್ಮ, ಈ ಎರಡು ಗ್ರಾಮನಾಮವಾಚಿ ಅಡ್ಡಹೆಸರುಗಳನ್ನು ಹೀಗೆ ಅರ್ಥೈಸಿಕೊಳ್ಳಬಹುದು.

17ನೇ ಶತಮಾನದಲ್ಲಿ ಬರುವ ಹಾಗಲವಾಡಿ ಮುದ್ವೀರಸ್ವಾಮಿ ಎಂಬ ಸ್ವರವಚನಕಾರ. ಈತ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದ್ದು, ಮುರಿಗಾ ಶಾಂತವೀರರ ಶಿಷ್ಯ ಎಂದು, ಸ್ವರವಚನಗಳ ಜೊತೆಗೆ "ಶಿವತತ್ವ ಸುಜ್ಞಾನ ಪ್ರದೀಪಿಕೆ" ಎಂಬ ಗ್ರಂಥದ ಕರ್ತೃ ಎಂದೂ ಹೇಳುತ್ತೇವೆ. ಜೊತೆಗೆ ಇನ್ನೂ ಆಳಕ್ಕಿಳಿದು ಈತನನ್ನು ಗುರುತಿಸಲಾಗಿ ಈತ ಹಾಗಲವಾಡಿ ಪಾಳೇಗಾರರ ಮನೆತನಕ್ಕೆ ಸೇರಿದ ಇಮ್ಮಡಿ ಮುದಿಯಪ್ಪ ನಾಯಕನ ಗುರು, ಈತನೊಬ್ಬ ರಾಜಗುರು, ರಾಜಕವಿ, ಅನುಭಾವಿ, ಶಿವಯೋಗಿಯಾಗಿದ್ದ, ಈತನಿಗೆ ಮುದ್ವೀರಯೋಗಿ, ಮುದ್ವೀರೇಶ ಎಂದೂ ಕರೆಯಲಾಗುತ್ತಿತ್ತು. ಈ ಎಲ್ಲ ಅಂಶಗಳ ಜೊತೆಗೆ ಪ್ರಮುಖವಾಗಿ ನಮಗೆ ತಿಳಿದುಬರುವುದೇನೆಂದರೆ–

ಕನ್ನಡ ಸಾಹಿತ್ಯ ಸಂವರ್ಧನೆಗೆ ವೀರಶೈವ ಅರಸು ಮನೆತನಗಳ ಕೊಡುಗೆ ಅಪಾರವಾಗಿದೆ. ಅದರಲ್ಲೂ ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಕೊಡುಗೆ ಸಿಂಹಪಾಲು ಎಂದೇ ಹೇಳಬಹುದು. ಈ ಕೊಡುಗೆಯಲ್ಲಿ ವಿಜಯನಗರ ಸಾಮ್ರಾಜ್ಯದ ಜೊತೆ ಕೈಜೋಡಿಸಿದ ಅನೇಕ ಹಿರಿ–ಕಿರಿಯ ಸಾಮಂತ, ಮಾಂಡಲೀಕ ಹಾಗೂ ಪಾಳೇಗಾರ ಮನೆತನಗಳೂ ಸೇರ್ಪಡೆಯಾಗಿವೆ. ಇವುಗಳಲ್ಲಿ ಹಾಗಲವಾಡಿ ಪಾಳೇಗಾರರು ಒಬ್ಬರು.

ಹಾಗಲವಾಡಿ ಪಾಳೇಗಾರರು ವಿಜಯನಗರ ಸಾಮ್ರಾಜ್ಯದ ಅಧೀನ ಸಾಮಂತರು. ಈ ವಂಶದ ಮೂಲಪುರುಷ ಎರಿಮಾದನಾಯಕ. ಇವನ ತರುವಾಯ ಇವನ ಮಗ ಸಾಲಿನಾಯಕ, ಇವನ ಮಗ ಭೈರವ ನಾಯಕ, ಇವನ ಮಗ ಮುದಿಯಪ್ಪನಾಯಕ, ಇವನ ಮಗ ಇಮ್ಮಡಿ ಭೈರಪ್ಪ ನಾಯಕ, ಮುಂದೆ ಚೆನ್ನಬಸವಪ್ಪನಾಯಕ, ಇವರ ಮಗ ಇಮ್ಮಡಿ ಮುದಿಯಪ್ಪನಾಯಕ ಹೀಗೆ ಒಟ್ಟು 13 ಜನ ಅರಸರು 200 ವರ್ಷ ಕಾಲ ಹಾಗಲವಾಡಿ ಸಂಸ್ಥಾನವನ್ನು ಆಳಿದರು. ವೀರಶೈವಧರ್ಮ, ಸಾಹಿತ್ಯ, ಸಂಸ್ಕೃತಿಗಳಿಗೆ ಅತ್ಯಮೂಲ್ಯ ಸೇವೆ ಸಲ್ಲಿಸಿದ್ದಾರೆ.

1720 ರಲ್ಲಿ ಆಳ್ವಿಕೆಗೆ ಬರುವ ಇಮ್ಮಡಿ ಮುದಿಯಪ್ಪ ನಾಯಕ ಸ್ವತಃ ಧರ್ಮಿಷ್ಠನೂ, ಯೋಗಿಯೂ, ಕವಿಯೂ ಆಗಿದ್ದ. ಉತ್ತಮ ಸಂಸ್ಕಾರ, ವಿದ್ಯೆ, ಆದರ್ಶಗಳನ್ನು ಹೊಂದಿದ್ದ. ಈತ ಧರ್ಮ, ಸಾಹಿತ್ಯ, ಸಂಸ್ಕೃತಿಗಳಿಗೆ ಅನನ್ಯವಾದ ಕೊಡುಗೆ ಕೊಟ್ಟ.

ಈತ ಪರಲೋಕ ಸಾಧನೆಗೋಸ್ಕರ ಕಾಶಿಯಲ್ಲಿರುವ ಮಹಾಜ್ಞಾನಿಗಳೂ, ಅನುಭಾವಿಗಳೂ, ಶಿವಯೋಗಿಗಳೂ ಆದ ಮುದ್ವೀರಸ್ವಾಮಿಯನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು, ರಾಜಗುರುವೆಂದು ಸ್ವೀಕರಿಸಿ, ಇವರಿಂದ ತತ್ವಜ್ಞಾನೋಪದೇಶ ಪಡೆದ.

ಹೀಗೆ ಹಾಗಲವಾಡಿ ಪಾಳೇಗಾರರ ಮನೆತನಕ್ಕೆ ಸೇರಿದ ಇಮ್ಮಡಿ ಮುದಿಯಪ್ಪನಾಯಕನು ಕಾಶಿಯಿಂದ ಕರೆದು ತಂದ. ಅನುಭಾವಿ ಕವಿಯೇ ಈ ಮುದ್ವೀರಸ್ವಾಮಿ. ಈತನ ಹೆಸರು ಮುದ್ವೀರಸ್ವಾಮಿ ಎಂದಿದ್ದರೂ ಸಾಹಿತ್ಯ ಚರಿತ್ರೆಯಲ್ಲಿ ಈತನನ್ನು ಗುರುತಿಸುವುದು ಹಾಗಲವಾಡಿ ಮುದ್ವೀರಸ್ವಾಮಿ ಎಂದೇ. ಈತನ ಮೂಲಕ ಹಾಗಲವಾಡಿ ಸಂಸ್ಥಾನದ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳಬಹುದು.

### *ಗುಡ್ಡಾಪುರ ದಾನಮ್ಮ*

ಬಸವಣ್ಣನವರ ಸಮಕಾಲೀನಳಾದ ಈ ಶಿವಶರಣೆಯ ಮೂಲಹೆಸರು ಲಿಂಗಮ್ಮ, ಇವಳ ಜನ್ಮಸ್ಥಳ ಜತ್ ತಾಲೂಕಿನ ಉಮರಾಣಿ. ಬಾಲ್ಯದಿಂದಲೂ ಶಿವಾನುಭವದಲ್ಲಿ ಆಸಕ್ತಿ ಹೊಂದಿದ ಇವಳು ಏಕಾಂಗಿಯಾಗಿ ಕಲ್ಯಾಣಕ್ಕೆ ಬಂದು ಬಸವಣ್ಣನವರಿಂದ "ದಾನಮ್ಮ" ಎಂಬ ಹೆಸರನ್ನು ಪಡೆದಳು. ಲೋಕ ಕಲ್ಯಾಣಕ್ಕಾಗಿ ಕೇವಲ ಪೂಜೆ ಮಾಡಿದರೆ ಸಾಲದು ಎಂದು, ತನ್ನ ಪತಿಯ ಜೊತೆ ಧರ್ಮಪ್ರಸಾರದಲ್ಲಿ ತೊಡಗಿ ಶ್ರೀಶೈಲಕ್ಕೆ ಹೋಗುತ್ತಾಳೆ. ಅನೇಕ ಜನಪರ ಕಾರ್ಯ ಕೈಗೊಂಡು, ಅನೇಕರಿಗೆ ಲಿಂಗದೀಕ್ಷೆ ಮಾಡುತ್ತಾಳೆ. ಆದವಾನಿ, ಆಲಂಪುರಗಳಲ್ಲಿ ಸಾಕಷ್ಟು ಧಾರ್ಮಿಕ ಕಾರ್ಯ ಕೈಗೊಂಡು ಜನಮಾನಸದಲ್ಲಿ ನೆಲೆನಿಂತಳು. ಜನಪರ

ಕಾರ್ಯ, ಅನೇಕರಿಗೆ ಲಿಂಗದೀಕ್ಷೆ ಮಾಡುತ್ತಾ ಕೊನೆಗೆ ಗುಡ್ಡಾಪುರದಲ್ಲಿ ಐಕ್ಯವಾಗುತ್ತಾಳೆ. ಕರ್ನಾಟಕ, ಮಹಾರಾಷ್ಟ್ರದ ಅನೇಕ ಮನೆತನಗಳ ಮನೆದೇವರಾಗಿ, ಆರಾಧ್ಯ ದೇವತೆಯಾಗಿ ನೆಲೆನಿಂತ ಗುಡ್ಡಾಪುರ ದಾನಮ್ಮ ಶಾಸನಗಳಲ್ಲಿ, ಕಾವ್ಯಗಳಲ್ಲಿ ಇವಳ ದಾನ–ಧರ್ಮದ ಉಲ್ಲೇಖವಿರುವುದು ಕಂಡುಬರುತ್ತದೆ. ದಾನಮ್ಮನ ಐಕ್ಯಸ್ಥಳ ಗುಡ್ಡಾಪುರವಾಗಿರುವುದರಿಂದ ಇವಳು ವರದಾನಿ ಗುಡ್ಡವ್ವೆಯೆಂದೂ, ಗುಡ್ಡಾಪುರ ದಾನಮ್ಮಳೆಂದೂ ಪ್ರಖ್ಯಾತಳಾಗಿದ್ದಾಳೆ.

ಹೀಗೆ ಅಡ್ಡಹೆಸರುಗಳು ಒಂದು ಮನೆತನ ಮಾತ್ರವಲ್ಲ, ಒಂದು ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ ಹಾಗೂ ಜನಾಂಗಿಕ ಅಧ್ಯಯನ ಮಾಡಲು ಸಹಕಾರಿಯಾಗಿವೆ.

**ವೃತ್ತಿನಾಮವಾಚಿ ಅಡ್ಡಹೆಸರುಗಳು**

ಗ್ರಾಮನಾಮವಾಚಿ ಅಡ್ಡಹೆಸರುಗಳನ್ನು ಹೊರತುಪಡಿಸಿದರೆ ಅತೀಹೆಚ್ಚು ಬಳಕೆಯಲ್ಲಿರುವ ಅಡ್ಡಹೆಸರುಗಳೆಂದರೆ ವೃತ್ತಿನಾಮವಾಚಿ ಅಡ್ಡಹೆಸರುಗಳು. 12ನೆಯ ಶತಮಾನದ ಶರಣರ ಕಾಲಘಟ್ಟವನ್ನು ವೃತ್ತಿನಾಮವಾಚಿ ಅಡ್ಡಹೆಸರುಗಳ ಸುಗ್ಗಿಯ ಕಾಲವೆಂದೇ ಹೇಳಬಹುದು. ಏಕೆಂದರೆ ಶರಣರ ಕಾಲದಲ್ಲಿ "ವೃತ್ತಿಯೇ ಬೆಳೆದು ಜಾತಿಯಾಗಿ"ರುವುದರಿಂದ ವೃತ್ತಿನಾಮವಾಚಿ ಅಡ್ಡಹೆಸರುಗಳೇ ಜಾತಿನಾಮವಾಚಿ ಅಡ್ಡಹೆಸರುಗಳಾಗಿವೆ. ವೃತ್ತಿಯನ್ನೇ ಪ್ರೀತಿಸುವ ಶರಣರು ಕಾಯಕ ಮೌಲ್ಯವನ್ನು ಎತ್ತಿಹಿಡಿದವರು. ಹೀಗಾಗಿ ತಮ್ಮ ವೃತ್ತಿಯನ್ನೇ ತಮ್ಮ ಹೆಸರಿಗೆ ಸೇರಿಸಿಕೊಂಡಿರಬಹುದು. ಇದು ಅವರಿಗೆ ಹೆಮ್ಮೆ, ಗೌರವ, ಅಭಿಮಾನದ ಸಂಕೇತವೂ ಆಗಿದೆ. ಉದಾ: ಜೇಡರ ದಾಸಿಮಯ್ಯ, ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ತುರುಗಾಹಿ ರಾಮಣ್ಣ, ಗಾಣದ ಕನ್ನಪ್ಪ, ಹಡಪದ ಅಪ್ಪಣ್ಣ, ಮೇದಾರ ಕೇತಯ್ಯ, ನುಲಿಯ ಚೆಂದಯ್ಯ, ಆಯ್ದಕ್ಕಿ ಮಾರಯ್ಯ, ಆಯ್ದಕ್ಕಿ ಲಕ್ಕಮ್ಮ, ಅಂಬಿಗರ ಚೌಡಯ್ಯ, ನಗೆಯ ಮಾರಿತಂದೆ, ಜಗಳಗಂಟ ಕಾಮಣ್ಣ, ರಾಯಸದ ಮಂಚಣ್ಣ, ಒಕ್ಕಲಿಗ ಮುದ್ದಣ್ಣ, ಸೂಳೆ ಸಂಕವ್ವೆ, ಹಾದರ ಕಾಯಕದ ರೆಮ್ಮವ್ವೆ, ಸಗರದ ಬೊಮ್ಮಣ್ಣ, ಹೆಂಡದ ಮಾರಯ್ಯ, ಲಕ್ಕಣ್ಣ ದಂಡೇಶ, ಬಿಲ್ಲೇಶ ಬೊಮ್ಮಯ್ಯ, ಕುಂಬಾರ ಗುಂಡಯ್ಯ ಹೀಗೆ ಇನ್ನೂ ಅನೇಕ ಶರಣರನ್ನು ಇಲ್ಲಿ ಸೇರಿಸಬಹುದು.

ಈ ವೃತ್ತಿನಾಮವಾಚಿ ಅಡ್ಡಹೆಸರುಗಳನ್ನು ಅಧ್ಯಯನದ ಅನುಕೂಲದ ದೃಷ್ಟಿಯಿಂದ ಹೀಗೆ ವಿಂಗಡಿಸಬಹುದು.

1. ವ್ಯಾಪಾರ ವೃತ್ತಿನಾಮವಾಚಿ ಅಡ್ಡಹೆಸರುಗಳು
2. ಆಡಳಿತ ವೃತ್ತಿನಾಮವಾಚಿ ಅಡ್ಡಹೆಸರುಗಳು
3. ಧಾರ್ಮಿಕ ವೃತ್ತಿನಾಮವಾಚಿ ಅಡ್ಡಹೆಸರುಗಳು
4. ಇತರೇ ವೃತ್ತಿನಾಮವಾಚಿ ಅಡ್ಡಹೆಸರುಗಳು

ಹಳಗನ್ನಡ ಕಾಲಘಟ್ಟದಲ್ಲಿ ಕುಟುಂಬದ ಸದಸ್ಯರು ಮಾಡುವ ಕೆಲಸದ ಹಿನ್ನೆಲೆಯಲ್ಲಿ ಕುಟುಂಬನಾಮವನ್ನು ಗುರುತಿಸಲಾಗಿದೆ. ಉದಾ: ಎಣ್ಣೆಯ ಬೀಜಗಳನ್ನು ಗಾಣಗಳಲ್ಲಿ ಹಾಕಿ ಎಣ್ಣೆ ತೆಗೆಯುವವರನ್ನು ಗಾಣಿಗರು ಎಂದು, ದನಗಳನ್ನು ಕಾಯುವ ಕೆಲಸ ಮಾಡುವವರು ದನಗಾಹಿಗಳೆಂದು, ಕುರಿಗಳನ್ನು ಸಾಕಿ ಅದನ್ನೇ ಉದ್ಯೋಗವಾಗಿಸಿಕೊಂಡವರನ್ನು ಕುರುಬರು ಅಥವಾ ಕುರಿ ಎಂದೂ, ಅರಿವೆಗಳನ್ನು ಹೊಲೆಯುವವರಿಗೆ ಸಿಂಪಿಗರೆಂದೂ, ಕಟ್ಟಿಗೆಯಿಂದ ವಸ್ತುಗಳನ್ನು ತಯಾರಿಸುವವರಿಗೆ ಬಡಗಿ ಎಂದೂ, ಕಬ್ಬಿಣದ ವಸ್ತುಗಳನ್ನು ಸಿದ್ಧಪಡಿಸುವವರಿಗೆ ಕಮ್ಮಾರ ಎಂದೂ, ಕ್ಷೌರಿಕ ಕೆಲಸ ಮಾಡುವವರಿಗೆರ ಹಡಪದ ಅಥವಾ ನವಲಿಗ ಎಂದೂ, ಅರಿವೆಗಳನ್ನು ಮಡಿ ಮಾಡಿ ಕೊಡುವವರು ಮಡಿವಾಳ ಎಂದೂ, ಬಂಗಾರದಲ್ಲಿ ವಸ್ತುಗಳನ್ನು ಸಿದ್ಧಪರಿಸುವವರು ಪತ್ತಾರ ಎಂದೂ, ಮಣ್ಣಿನಲ್ಲಿ ಮಡಿಕೆ–ಕುಡಿಕೆಗಳನ್ನು ಮಾಡುವವರು ಕುಂಬಾರ ಎಂದೂ, ದೋಣಿ ನಡೆಸುವವರು ಅಂಬಿಗೇರ ಎಂದೂ, ಮೀನು–ಆಮೆಗಳನ್ನು ಹಿಡಿಯುವವರು ಬೆಸ್ತರೆಂದೂ, ಕೃಷಿಕಾರ್ಯ ಮಾಡುವವರಿಗೆ ಒಕ್ಕಲಿಗ ಎಂದೂ, ಹೂಗಳನ್ನು ಕಟ್ಟಿ ಮಾರುವವರು ಹೂಗಾರ, ಅರಿವೆ ನೇಯುವವ

ನೇಕಾರ, ದಂಡಿನಲ್ಲಿ ನಾಯಕನಾದವನಿಗೆ ದಂಡೇಶ ಅಥವಾ ದಳವಾಯಿ, ಬಿಲ್ಲು–ಬಾಣಗಳನ್ನು ಸಿದ್ಧಮಾಡಿ, ಯುದ್ಧದಲ್ಲಿ ಹೋರಾಡುವವರಿಗೆ ಬಿಲ್ಲನವರ ಎಂದು ಅವರುಗಳು ಮಾಡುವ ಕೆಲಸಗಳಿಗನುಗುಣವಾಗಿ ಈ ಅಡ್ಡಹೆಸರುಗಳು ಬಂದಿರುವುದು ಕಂಡುಬರುತ್ತದೆ. ಕೆಲವು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಬಹುದು.

***ತಳವಾರ***

ತಳದ ಪಾರ ಮಾಡುವವನೇ ತಳವಾರ. ಅಂದರೆ ಊರ ಸಂರಕ್ಷಣೆ ಮಾಡುವವ, ಊರನ್ನು ರಕ್ಷಿಸುವವ, ಜೊತೆಗೆ ಊರ ಗೌಡನಿಗೆ ಸಹಾಯಕನಾಗಿ ಕೆಲಸ ಮಾಡುವವ ಎಂದರ್ಥ. ವಡ್ಡಾರಾಧನೆಯ "ವಿದ್ಯುಚ್ಚೋರನೆಂಬ ರಿಸಿಯ ಕಥೆ"ಯಲ್ಲಿ "ತಳವಾರನ ಮಗನಪ್ಪುದರಿಂ ತನಗೆ ತಕ್ಕ ಕಳ್ಳರನಾರಯ್ವ ತೆರನಂ ಪೇಳ್ವೆ ಸುರಖಿಮೆಂಬೋದಂ ಕಲ್ತೋನ್" ಎಂಬುದಾಗಿ ಬರುತ್ತದೆ. ಹಾಗೆಯೇ "ಎಳ್ಳುಗಾಣಿಗ ಬಲ್ಲ, ಸುಳ್ಳು ಸಿಂಪಿಗಬಲ್ಲ, ಕಳ್ಳರನು ಬಲ್ಲ ತಳವಾರ" ಎಂಬ ಸರ್ವಜ್ಞನ ಹೇಳಿಕೆ, "ತಳಾರನಂತೆ ನಿದ್ರೆಗೆಟ್ಟು" ಎಂಬ ನಯಸೇನನ ಮಾತುಗಳಿಂದ ತಳವಾರರು ಕಳ್ಳರನ್ನು ಹಿಡಿಯುವ, ಊರ ಸಂರಕ್ಷಿಸುವ ಕಾರ್ಯ ಮಾಡುತ್ತಿದ್ದರೆಂಬುದಾಗಿ ತಿಳಿದುಬರುತ್ತದೆ.

***ಕುಂಬಾರ ಗುಂಡಯ್ಯ***

ಮಣ್ಣಿನಿಂದ ಮಡಕೆಯನ್ನು ಮಾಡುವವರು ಕುಂಬಾರರು. ಇಲ್ಲಿ ಬರುವ ಗುಂಡಯ್ಯನೆಂಬ ಶಿವಭಕ್ತ. ಮಡಕೆ ಮಾಡುವ ಸಂದರ್ಭದಲ್ಲಿ ಮಡಕೆಯನ್ನು ಬಡಿಯುವ ತಾಳಕ್ಕೆ ಸರಿಯಾಗಿ ಶಿವ ಸ್ಮರಣೆಯನ್ನು ಮಾಡುತ್ತಿದ್ದ. ಈತನ ಭಕ್ತಿಯ ಪರಾಕಾಷ್ಠೆಯನ್ನು ಹರಿಹರ ತನ್ನ ಕುಂಬಾರ ಗುಂಡಯ್ಯನ ರಗಳೆಯಲ್ಲಿ ವಿವರಿಸಿದ್ದಾನೆ.

***ಲಕ್ಕಣ ದಂಡೇಶ:***

"ಶಿವತತ್ವ ಚಿಂತಾಮಣಿ" ಕೃತಿಯ ಕರ್ತೃವಾದ ಈತ ವಿಜಯನಗರದ ಅರಸು ಎರಡನೇ ದೇವರಾಯನ ಮಹಾಮಂತ್ರಿಯೂ, ದಂಡನಾಯಕನೂ ಆಗಿದ್ದ. ದಂಡಿನ ನಾಯಕನಾದ ಕಾರಣ ಈತನಿಗೆ ದಂಡೇಶ ಎಂದು ಕರೆಯಲಾಗಿದೆ. ಇದೇ ಹೆಸರೀಗ ದಳವಾಯಿ ಎಂದು ಪ್ರಚಲಿತವಾಗಿದೆ.

***ಹೂಗಾರ ಅಥವಾ ಮಾಲೆಗಾರರು***

ಬಗೆಬಗೆಯ ಹೂಗಳ ಮಾಲೆ ಸಿದ್ಧಪಡಿಸಿ ಮಾರುವವರು. ವಡ್ಡಾರಾಧನೆಯ ಚಾಣುಕ್ಯರಿಸಿಯ ಕಥೆಯಲ್ಲಿ "ವಸಂತಕ"ನೆಂಬ ಮಾಲೆಗಾರನ ಉಲ್ಲೇಖವಿದೆ.

***ಸೂಳೆ ಸಂಕವ್ವೆ***

ವೇಶ್ಯಾವಾಟಿಕೆಯನ್ನೇ ತನ್ನ ವೃತ್ತಿಯನ್ನಾಗಿಸಿ ಕೊಂಡ ಶಿವಶರಣೆ. ಈ ವೃತ್ತಿ ಕುರಿತಾಗಿ ವಡ್ಡಾರಾಧನೆ, ಪಂಪಭಾರತಗಳಲ್ಲೂ ಸೂಳೆಗೇರಿ ಹಾಗೂ ಸೂಳೆಯರ ಮನೆತನದ ಉಲ್ಲೇಖ ಬಂದಿದೆ.

***ದಾನಚಿಂತಾಮಣಿ ಅತ್ತಿಮಬ್ಬೆ***

10ನೆಯ ಶತಮಾನದಲ್ಲಿ ಕನ್ನಡ ನಾಡಿಗೆ ಸೇವೆಗೈದ ಮಹಿಳಾ ಸಾಧಕಿ ಅತ್ತಿಮಬ್ಬೆ ರನ್ನನ ಅಜಿತಪುರಾಣ ಹಾಗೂ ಪೊನ್ನನ ಶಾಂತಿಪುರಾಣದ 1000 ಪ್ರತಿಗಳನ್ನು ಮಾಡಿಸಿ ಶಾಸ್ತ್ರ ದಾನ ಮಾಡಿ ಜೈನಧರ್ಮದ ಕುಲದೀಪಕಳಾದಳು. ಜಿನಪ್ರತಿಮೆಗಳನ್ನು ದಾನ ಮಾಡಿದಳು. ಹೀಗಾಗಿ ಇವಳಿಗೆ ದಾನಚಿಂತಾಮಣಿ ಅತ್ತಿಮಬ್ಬೆ ಎಂದು ಕರೆಯಲಾಗಿದೆ.

**ವ್ಯಕ್ತಿ ನಾಮವಾಚಿ ಅಡ್ಡಹೆಸರುಗಳು**

ಕೆಲವು ಕುಟುಂಬನಾಮಗಳು ವ್ಯಕ್ತಿನಾಮಗಳಿಂದಲೇ ಪ್ರಸಿದ್ಧವಾಗಿರುತ್ತವೆ. ಉದಾ: ಪಂಪ, ರನ್ನ, ಪೊನ್ನ, ಜನ್ನ, ನಾಗಚಂದ್ರ, ನಯಸೇನ, ದುರ್ಗಸಿಂಹ, ಹರಿಹರ, ರಾಘವಾಂಕ, ಲಕ್ಷ್ಮೀಶ, ಕುಮಾರವ್ಯಾಸ, ಚಾಮರಸ, ಸರ್ವಜ್ಞ, ಪುರಂದರದಾಸ, ಕನಕದಾಸ, ರತ್ನಾಕರವರ್ಣಿ, ಮುದ್ದಣ ಹೀಗೆ ಈ ಎಲ್ಲ ಹೆಸರುಗಳನ್ನು ನೋಡಲಾಗಿ ತಿಳಿದುಬರುವುದೇನೆಂದರೆ – ಈ ಎಲ್ಲ ಕವಿಗಳು ಹಳಗನ್ನಡ ಸಾಹಿತ್ಯದ

ಮೇರುಸದೃಶ ಕವಿಗಳು, ಪ್ರಾತಿನಿಧಿಕ ಕವಿಗಳು, ಕೆಲವರು ಕನ್ನಡ ಸಾಹಿತ್ಯಕ್ಕೆ ಸುವರ್ಣಯುಗವನ್ನು ತಂದುಕೊಟ್ಟರೆ, ಕೆಲವರು ಹೊಸ ಸಾಹಿತ್ಯದ ಹುಟ್ಟಿಗೆ ಕಾರಣೀಕರ್ತರಾದರು. ಅವರಿವರೆನ್ನದೇ ಒಬ್ಬೊಬ್ಬ ಕವಿಯು ಕನ್ನಡ ಸಾಹಿತ್ಯಕ್ಕೆ ಒಂದೊಂದು ಮೈಲುಗಲ್ಲನ್ನು ನಿಲ್ಲಿಸಿದವರೇ. ಇವರೆಲ್ಲರೂ ತಮ್ಮ ಹೆಸರಿನಿಂದ ಮಾತ್ರ ತಮ್ಮನ್ನು ಗುರುತಿಸಿಕೊಂಡಿದ್ದಾರೆಯೇ ಹೊರತು, ಎಲ್ಲಿಯೂ ತಮ್ಮ ಜಾತಿ, ವೃತ್ತಿ, ಗ್ರಾಮ, ಮನೆತನದ ಹೆಸರುಗಳನ್ನು ಹೇಳಿರುವುದಿಲ್ಲ. ಇದನ್ನು ನೋಡಲಾಗಿ ಕುಟುಂಬನಾಮದಿಂದ ತಮ್ಮನ್ನು ಗುರುತಿಸಿಕೊಳ್ಳುವ ಪರಿಪಾಠ ಆಗ ರೂಢಿಯಲ್ಲಿರಲಿಲ್ಲವೇನೋ ಎನಿಸುತ್ತದೆ. ಏಕೆಂದರೆ –

***ಆದಿಕವಿ ಪಂಪ*** ಕನ್ನಡ ಸಾಹಿತ್ಯದ ಅಗ್ರಕವಿ, ಕವಿಚಕ್ರವರ್ತಿ. ಮೂಲತಃ ಮತದಿಂದ ಬ್ರಾಹ್ಮಣನಾಗಿದ್ದು, ಆನಂತರ ಜೈನಮತಕ್ಕೆ ಮತಾಂತರ ಹೊಂದಿದವ. ಪಂಪನ ಪೂರ್ವಜರು ವೆಂಗಿಮಂಡಲದ 'ವೆಂಗಿಪಜು' ಎಂಬ ಅಗ್ರಹಾರದವರು. ಮಾಧವ → ಸೋಮಯಾಜಿ ಅಭಿಮಾನಚಂದ್ರ →ಕೊಮರಯ್ಯ → ಭೀಮಪ್ಪಯ್ಯ ಪಂಪ. ಈ ವಂಶಾವಳಿಯನ್ನು ನೋಡಲಾಗಿ ಪಂಪನ ಪೂರ್ವಜರು ಬ್ರಾಹ್ಮಣರಾಗಿದ್ದು, ಮಾಧವ ಸೋಮಯಾಜಿ ಎಂಬುದು ಪುರೋಹಿತ ಇಲ್ಲವೆ ಆಚಾರ್ಯರ ಕುಟುಂಬವಾಗಿರಬಹುದು. ಜೊತೆಗೆ ಪಂಪನ ತಾಯಿ ಅಣ್ಣಿಗೆರೆಯ ಜೋಯಿಸಸಿಂಘನ ಮೊಮ್ಮಗಳಾಗಿದ್ದಳು. ಅಂದರೆ ಇವರು ಈಗಿನ 'ಜೋಶಿ' ಅಂದರೆ 'ಜೋತಿಷ್ಯ' ಹೇಳುವುದನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡ

ಕುಟುಂಬದವರಾಗಿರಬಹುದು. ಹೀಗಿದ್ದಾಗಲೂ ಪಂಪ ತನ್ನ ಹೆಸರಿನ ಜೊತೆ ಯಾವುದೇ ಕುಟುಂಬನಾಮವನ್ನು ಬಳಸಿಕೊಂಡಿರುವುದಿಲ್ಲ. ಕೇವಲ "ಪಂಪ" ಎಂಬ ಹೆಸರನ್ನೇ ಸಾಹಿತ್ಯ ಲೋಕದಲ್ಲಿ ಚಿರಸ್ಥಾಯಿಗೊಳಿಸಿದ್ದಾನೆ.

ಇದೇ ರೀತಿಯಾಗಿ 'ರನ್ನ' ಕನ್ನಡ ಸಾಹಿತ್ಯದ 'ಶಕ್ತಿಕವಿ' ಎಂದು ಗುರುತಿಸಿಕೊಂಡಿದ್ದಾನೆ. ಆದರೆ ರನ್ನ ಬಳೆಗಾರ ಮನೆತನದವ ಎಂದು ಎಲ್ಲಿಯೂ ಅದನ್ನು ಹೇಳಿರುವುದಿಲ್ಲ. ರನ್ನನೇನಾದರೂ ಕುಲಕಸುಬನ್ನು ಕೈಗೆತ್ತಿಕೊಂಡು ಬಳೆಮಲಾರವನ್ನು ಹೊತ್ತು ಊರೂರು ತಿರುಗಿದ್ದರೆ ಕನ್ನಡ ಸಾಹಿತ್ಯ ಇಂತಹ ಶಕ್ತಿ ಕವಿಯನ್ನು ಕಳೆದುಕೊಳ್ಳುತ್ತಿತ್ತು.

***ಹರಿಹರ*** – ದೋರಸಮುದ್ರದ ನರಸಿಂಹ ಬಲ್ಲಾಳನಲ್ಲಿ ಕರಣಿಕನಾಗಿದ್ದ. ಅಂದರೆ ಈತನಿಗೆ ಕುಲಕರ್ಣಿ ಎಂಬ ಅಡ್ಡಹೆಸರು ಬರಬಹುದಿತ್ತು. ಆದರೆ ಹರಿಹರ ಎಂದೇ ರೂಢಿಯಲ್ಲಿದೆ. ಹಂಪೆ ಇವನ ಕಾರ್ಯಕ್ಷೇತ್ರವಾದ ಕಾರಣ ಹಂಪೆಯ ಹರಿಹರ ಎಂದೂ ಕರೆಯುತ್ತೇವೆ.

ಹೀಗೆ ಮೇಲೆ ಸೂಚಿಸಿರುವ ಎಲ್ಲ ಪ್ರಾತಿನಿಧಿಕ ಕವಿಗಳೂ ತಮ್ಮ ಹೆಸರನ್ನು ಮಾತ್ರ ಹೇಳಿರುವುದು ಕಂಡುಬರುತ್ತದೆ. ಅಂದರೆ ಹಳಗನ್ನಡ ಕಾಲದಲ್ಲಿ ಕುಟುಂಬನಾಮ ಇಲ್ಲವೆ ಅಡ್ಡಹೆಸರುಗಳ ಬಳಕೆ ಅಷ್ಟು ಪ್ರಚಲಿತವಾಗಿರಲಿಲ್ಲ. ಕೇವಲ ವಿರಳವಾಗಿ ಬಳಕೆಯಾಗುತ್ತಿತ್ತೆಂದು ಹೇಳಬಹುದು.

ಹಾಗೆಯೇ ಮುಂದುವರೆದು ನೋಡಲಾಗಿ – ಒಂದೇ ಹೆಸರಿನ ಅನೇಕ ವ್ಯಕ್ತಿಗಳಿದ್ದಾಗ ಅವರನ್ನು ಗುರುತಿಸುವುದಕ್ಕೆ ಊರ ಹೆಸರನ್ನೋ, ವಿಶೇಷ ಸಾಧನೆಯನ್ನೋ ಇಟ್ಟುಕೊಂಡಿರುವುದು ಕಂಡುಬರುತ್ತದೆ. ಉದಾ: ನೀರಲಕೇರಿ ಬಸವಲಿಂಗ, ಕೂಡಲೂರು ಬಸವಲಿಂಗ, ಮೈಲಾರ ಬಸವಲಿಂಗ, ಸೋದೆಯ ಬಸವಲಿಂಗ ಹಾಗೂ ಐನೂಲಿ ಬಸವಲಿಂಗ. ಇವರೆಲ್ಲರೂ ಒಂದೇ ಹೆಸರಿನ ಸ್ವರವಚನಕಾರರು. ಹೀಗಾಗಿ ತಮ್ಮನ್ನು ಗುರುತಿಸಿಕೊಳ್ಳುವುದಕ್ಕೆರ ತಮ್ಮ ತಮ್ಮ ಊರುಗಳನ್ನೇ ತಮ್ಮ ಅಡ್ಡಹೆಸರಾಗಿ ಬಳಸಿಕೊಂಡಿದ್ದಾರೆ. ಅದೇ ರೀತಿ ಗರಗದ ಮಡಿವಾಳೇಶ್ವರರು, ಕಡಕೋಳ ಮಡಿವಾಳೇಶ್ವರರು. ಇನ್ನೊಂದು ಕಡೆ ನೋಡಲಾಗಿ ಅಮರಗುಂಡದ ಮಲ್ಲಿಕಾರ್ಜುನ,

ಸೂಕ್ತಿಸುಧಾರ್ಣವದ ಮಲ್ಲಿಕಾರ್ಜುನ. ಅಂದರೆ ಒಬ್ಬ ವ್ಯಕ್ತಿ ಗ್ರಾಮನಾಮದೊಂದಿಗೆ ಗುರುತಿಸಿಕೊಂಡಿದ್ದರೆ, ಇನ್ನೊಬ್ಬ ತಾನು ಬರೆದ ಕೃತಿಯೊಂದಿಗೆ ತನ್ನನ್ನು ಗುರುತಿಸಿಕೊಂಡಿರುವುದು ಕಂಡುಬರುತ್ತದೆ. ಅದೇ ರೀತಿ ನಿಜಗುಣ ಶಿವಯೋಗಿಗಳು ಸ್ವರವಚನ ಸಾಹಿತ್ಯದ ಸಾರ್ವಭೌಮರೆಂದೇ ಚಿರಪರಿಚಿತರು. ಅವರು ರಚಿಸಿದ 174 ಹಾಡುಗಳನ್ನೊಳಗೊಂಡ, 5 ಸ್ಥಲಗಳಲ್ಲಿ ರಚಿತವಾದ "ಕೈವಲ್ಯ ಪದ್ಧತಿ"ಯು ಸ್ವರವಚನ ಸಾಹಿತ್ಯಕ್ಕೆ ಸುವರ್ಣಯುಗವನ್ನೇ ತಂದುಕೊಟ್ಟಿದೆ. ಆನಂತರ ಬಂದವರು "ಕೈವಲ್ಯ ಕಲ್ಪವಲ್ಲರಿ" ಕೃತಿ ಬರೆದು ಒಬ್ಬರು ಸರ್ಪಭೂಷಣ ಶಿವಯೋಗಿಗಳಾದರೆ, ಕೈವಲ್ಯ ಸೋಪಾನ ಬರೆದವರು ಬಾಲಲೀಲಾ ಮಹಾಂತ ಶಿವಯೋಗಿಗಳಾದರು.

***ತೋಂಟದ ಸಿದ್ಧಲಿಂಗರು*** – ವೀರಶೈವ ಧರ್ಮದ ಪುನರುಜ್ಜೀವನ ಕಾಲಘಟ್ಟದಲ್ಲಿದ್ದ ಇವರು ತಪಸ್ಸಿಗೆ ಕುಳಿತಾಗ ಇವರ ಸುತ್ತ ಹುತ್ತ ಬೆಳೆದಿತ್ತು. ಈ ಕಾರಣದಿಂದ ಇವರಿಗೆ ತೋಂಟದ ಸಿದ್ಧಲಿಂಗರು ಎಂದು ಕರೆಯಲಾಗುತ್ತಿದೆ.

**ಅಣಕವಾಚಿ ಅಡ್ಡಹೆಸರುಗಳು**

ಕೆಲವು ಅಡ್ಡಹೆಸರುಗಳು ವ್ಯಕ್ತಿಯ ರೂಪ, ಸ್ವಭಾವ, ವ್ಯಕ್ತಿತ್ವ, ಆಕಾರ, ನಡತೆ ಇತ್ಯಾದಿ ಲಕ್ಷಣಗಳನ್ನು ಸೂಚಿಸುತ್ತವೆ. ಉದಾ: ವ್ಯಕ್ತಿ ಕುಂಟನಾಗಿದ್ದರೆ ಕುಂಟಪ್ಪ, ಗಿಡ್ಡನಾಗಿದ್ದರೆ ಗಿಡ್ಡಪ್ಪ, ಕೆಂಪಾಗಿದ್ದರೆ ಕೆಂಚಪ್ಪ, ಕಪ್ಪಾಗಿದ್ದರೆ ಕರಿಯಪ್ಪ ಎಂಬ ಹೆಸರಿನಿಂದ ಗುರುತಿಸುವಂತೆ 'ಯಶೋಧರ ಚರಿತೆ'ಯಲ್ಲಿ ಬರುವ ಗಜಶಾಲೆಯ ಮಾವುತನ ದೇಹದ ಆಕಾರ ವಿರೂಪವಾಗಿರುವುದನ್ನು ಕವಿ ಜನ್ನ "ಅಷ್ಟಾವಕ್ರ" ಎಂದು ಹೆಸರಿಸಿದ್ದಾನೆ.

***ಪಱಿದಲೆ ಕುೞಿನೊಸಲ್ ಅೞಿಗಣ್***
***ಬಱಿವಾಯ್ ಹಪ್ಪಳಿಕೆಮೂಗು  ಮುರುಟಿದ ಕಿವಿ ಬಿ***
***ಬ್ಬಿರಿವಲ್ ಕುಸಿಗೊರಲ್ ಇೞಿದೆರ್ದೆ***
***ಪೊೞಿಂಟಬೆನ್ ಬಾತಬಿೞ್ ಅಡಂಗಿದ ಜಘನಂ***

ಹೀಗೆ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಇಂತಹ ಇನ್ನೂ ಅನೇಕ ಅಡ್ಡಹೆಸರುಗಳು ಸಿಗುತ್ತವೆ. ಹಳಗನ್ನಡ ಸಾಹಿತ್ಯ ಚರಿತ್ರೆಯ ಬಹುಪಾಲು ಉತ್ತರ ಕರ್ನಾಟಕದ ಕವಿಗಳಿಂದಲೇ ರಚನೆಯಾಗಿರುವುದು. ಹೀಗಿದ್ದಾಗ ಉತ್ತರ ಕರ್ನಾಟಕದ ಪ್ರಮುಖ ಅಡ್ಡಹೆಸರುಗಳಾದ ಭಟ್ಟ, ಜೋಶಿ, ಶಾನುಭೋಗ, ಕುಲಕರ್ಣಿ, ಆಚಾರ್ಯ, ಹಿರೇಮಠ, ಸಾಲಿಮಠ, ಮಳೀಮಠ, ಮಠಪತಿ, ಪಟ್ಟಣಶೆಟ್ಟಿ, ಗೌಡರ, ಬಸನಗೌಡರ, ಪಾಟೀಲ, ಗೋಧಿ, ಅಕ್ಕಿ, ಮೆಣಸಿನಕಾಯಿ, ಜೋಳದ, ಅಂಬಲಿ, ಬಡಿಗೇರ ಈ ಮುಂತಾದ ಅಡ್ಡಹೆಸರುಗಳು ಹಳಗನ್ನಡದಲ್ಲಿ ಕಾಣಸಿಗುವುದಿಲ್ಲ. ಹಾಗೆಂದ ಮಾತ್ರಕ್ಕೆ ಈ ವೃತ್ತಿಯ, ಈ ಜಾತಿಯ, ಈ ಜನಾಂಗದ ಜನರಿದ್ದರೂ ಅವರು ತಮ್ಮ ಹೆಸರಿನ ಮೂಲಕವೇ ತಮ್ಮನ್ನು ಗುರುತಿಸಿಕೊಂಡಿರುವುದು ತಿಳಿದುಬರುತ್ತದೆ. ಇವರ ಅಧ್ಯಯನದ ಮೂಲಕ ಆಗಿನ ಕಾಲದ ಸಂಸ್ಕೃತಿ–ಪರಂಪರೆಗಳನ್ನು ಅವರ ಮನೆತನದ ಇತಿಹಾಸ, ಅವರ ಜೀವನವಿಧಾನ, ಅವರ ಮನೋಧರ್ಮಗಳನ್ನು ಅರಿತುಕೊಳ್ಳಬಹುದು. ಒಟ್ಟಾರೆಯಾಗಿ ಅಡ್ಡಹೆಸರುಗಳ ಅಧ್ಯಯನ ಸಂಸ್ಕೃತಿಯ ಅಧ್ಯಯನಕ್ಕೆ ಪೂರಕವಾಗುತ್ತದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು :**


- ಚಿದಾನಂದಮೂರ್ತಿ, ಎಂ. (1979). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
- ಈಶ್ವರಯ್ಯ ಮಠ. *ಸ್ವರವಚನ ಸಾಹಿತ್ಯ*
- ಕಲಬುರ್ಗಿ, ಎಂ.ಎಂ. (1995). *ಕನ್ನಡ ನಾಮ ವಿಜ್ಞಾನ.* ಸೌಜನ್ಯ
- ಕಲಬುರ್ಗಿ, ಎಂ.ಎಂ. (2010). *ಮಾರ್ಗ–2.* ಸಪ್ನ ಬುಕ್‌ಹೌಸ್.

- ಮುಗಳಿ, ರಂ.ಶ್ರೀ (2014). *ಕನ್ನಡ ಸಾಹಿತ್ಯ ಚರಿತ್ರೆ.* ಗೀತಾಬುಕ್ ಹೌಸ್
- ನಾರಾಯಣ, ಪಿ.ವಿ. (2009). ಚಂಪೂ ಕವಿಗಳು. ಸಪ್ನ ಬುಕ್‌ಹೌಸ್.
- ನಾರಾಯಣ, ಪಿ.ವಿ. (2016). *ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ. ಮುರುಘರಾಜೇಂದ್ರ ಗ್ರಂಥಮಾಲೆ*
- ಪಾಟೀಲ, ವ್ಹಿ.ಎಲ್. *ಅಡ್ಡಹೆಸರು*
- ಪಾಟೀಲ, ವ್ಹಿ.ಎಲ್. *ವಡ್ಡಾರಾಧನೆ – ಜಾನಪದೀಯ ಅಧ್ಯಯನ.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ವಿದ್ಯಾಶಂಕರ, ಎಸ್. *ವೀರಶೈವ ಪುರಾಣಗಳು ಒಂದು ಅಧ್ಯಯನ*